ಒಂದೊಂದು ತಮಾಷೆಗಳನ್ನು ಅರ್ಥಮಾಡಿಕೊಳ್ಳುವುದರಲ್ಲಿದೆ' ಎಂದು ನಾನು ಆಕೆಯ ಅಪ್ಪಟ ಪ್ರಾಮಾಣಿಕತೆಯನ್ನು ದೂರದಿಂದಲೇ ತಳ್ಳಿ ಹಾಕುತ್ತಿದ್ದೆ.

'ನೀನು ಯಾಕೆ ಜೀವನದಲ್ಲಿ ಯಾವುದನ್ನೂ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ ಗಂಡಾಡೇ' ಎಂದು ವಿಲಾಸಿನಿ ಕೇಳಿದ್ದಳು.

ಅವಳು ನನ್ನನ್ನು ಕರೆಯುವುದು 'ಗಂಡಾಡು' ಎಂದು.

ಅವಳ ಗಂಡ ಭಾಗಮಂಡಲದಲ್ಲಿ ಪಶುವೈದ್ಯರಾಗಿದ್ದಾಗ ಅವರ ವಸತಿಗೃಹದಲ್ಲಿ ಒಂದು ಟಗರು ಇತ್ತಂತೆ. ಸಾಹೇಬರ ಹಾಗೆ ಉದ್ದಕ್ಕೆ ಗಡ್ಡ ಬಿಟ್ಟುಕೊಂಡಿದ್ದ ಚೂಪು ಕೊಂಬುಗಳ ಕೊಬ್ಬಿದ ಗಂಡಾಡು. ಯಾವುದೋ ಸರಕಾರೀ ಯೋಜನೆಯ ಅಂಗವಾಗಿ ಸ್ಥಳೀಯ ಆಡುಗಳಿಗೆ ತಳಿ ಕಸಿ ಮಾಡಲು ತಂದಿದ್ದ ಉತ್ತರ ದೇಶದ ಟಗರು. ಅದು ಏನು ಹಣೆಯ ಬರಹವೋ ಏನೋ ಆ ಟಗರಿನಿಂದಾಗಿ ಒಂದು ಹೆಣ್ಣಾಡೂ ಗರ್ಭ ಧರಿಸಲಿಲ್ಲವಂತೆ. ಏನಾದರೂ ಸಾಂಕೇತಿಕ ತಕರಾರು ಇರಬಹುದು ಎಂದು ಅದನ್ನು ತಂದಲ್ಲಿಗೇ ವಾಪಸು ಕೊಂಡು ಹೋದರಂತೆ.

'ನಿನ್ನ ಗುಣವೂ, ರೂಪವೂ, ಪೆಡಸು ಪರಿಮಳವೂ ಅದರ ಹಾಗೇ ಇದೆ' ಅಂದಿದ್ದಳು. ಪತ್ರ ಬರೆಯುವಾಗಲೂ, ಯಾರೂ ಇಲ್ಲದಾಗಲೂ ಅವಳು ನನ್ನನ್ನು ಗಂಡಾಡು ಅಂತಲೇ ಕರೆಯುತ್ತಿದ್ದಳು.

ಅವಳು ಹಾಗೆ ಕರೆದಿದ್ದರಿಂದ ನಾನು ಒಂದು 'ಗಂಡಾಡು' ಎಂದೇ ನಾನು ಅಂದುಕೊಂಡಿದ್ದೆ.

ಆಮೇಲೆ ನೋಡಿದರೆ ಅವಳು ಚಾರುದತ್ತರಿಗೂ ಒಂದು ಪ್ರೇಮ ಪತ್ರ ಬರೆದಿದ್ದಳು. ಅಲ್ಲಿ ಅವರನ್ನು ಆಕೆ 'ಪುರುಷ ಸಿಂಹ' ಎಂದು ಕರೆದಿದ್ದಳು.

'ನನ್ನ ಪುರುಷ ಸಿಂಹವೇ, ನಿನ್ನ ಕರುಳೊಳಗೆ ಒಂದು ಮಿಕವಾಗಿ ಕರಗಿ ಹೋಗುವ ಆಸೆ. ನಿನ್ನ ಬಲಿಪಶುವಾಗಿ ನಿನ್ನೊಳಗೆ ಲೀನವಾಗುವ ಬಯಕೆ. ನಿನಗೆ ವಯಸ್ಸಾಗಿದೆ ಎಂದವರು ಯಾರು? ನೀನು ನನ್ನ ಕೊರಳಿಗೆ ತುಟಿಯಿಡುವಾಗ ತರುಣ ಸಿಂಹವೊಂದು ನನ್ನ ಪುಪ್ಪುಸದೊಳಕ್ಕೆ ನಖಗಳನ್ನು ಇಳಿಬಿಟ್ಟಂತಾಗುತ್ತದೆ ಕಣೋ' ಎಂದೆಲ್ಲಾ ಬರೆದಿದ್ದಳು.

'ಹೀಗೆ ಇವಳು ಬರೆದದ್ದು ಎಂತಕ್ಕೆ ಗೊತ್ತುಂಟಾ' ಆ ಪತ್ರದ ಸಾಲುಗಳನ್ನು ಓದಿ ಹೇಳಿದ ಚಾರುದತ್ತರು ಕನಸಲ್ಲಿ ಗಹಗಹಿಸಿ ನಕ್ಕಿದ್ದರು.

'ಅವಳಿಗೆ 'ರಕ್ತಚಂದನ' ಪಡೆಯುವ ಬಯಕೆ. ಸುಮ್ಮನೆ ಕೇಳಿದರೆ ಸಿಗುವುದಿಲ್ಲ ಅಂತ ಗೊತ್ತು. ಅದಕ್ಕೆ ಇದೆಲ್ಲ ಆಟ ಅವಳದು. ನಾನು ಎಂತಹ ಮುದುಕ ಅಂತ ಅವಳಿಗೆ ಎಲ್ಲಿ ಗೊತ್ತು. ನಾನು ಕೊಡಲಿಲ್ಲ. ಅದಕ್ಕೆ ಅಪಹರಿಸಲು ಸ್ಕೂಲು ಹತ್ತಿದಳು. ನಾನು ಬಿಡುತ್ತೇನಾ. ಬೀಳಿಸಿದೆ' ಅವರು ಹೇಳಿದ್ದರು.

ನಾನು ಅವರಿಗೆ ಹೇಗೆ ಹೇಳುವುದು, ಒಂದು ಕಾಲದಲ್ಲಿ ಅವಳು ನನಗೂ ಇದೇ ಪತ್ರವನ್ನು ಬರೆದಿದ್ದಳು ಎಂದು. ಕೆಲವು ಪದಗಳು ಬೇರೆ ಅಷ್ಟೆ. ಪುರುಷ ಸಿಂಹ ಇರುವಲ್ಲಿ ಗಂಡಾಡು. ಮಿಕವಾಗಿ ಎಂದು ಇರುವಲ್ಲಿ ಹಸಿರಾಗಿ ಇತ್ಯಾದಿ.

'ಆಗಿದ್ದು ಮುಗಿಯಿತು ಬಿಡಿ, ಇಕಾ ನಾನು ಬರೆಯಲು ಕೂರುತ್ತೇನೆ' ಎಂದು ನಾನು ನಿದ್ದೆಯಿಂದ ದಿಗ್ಗನೆ ಎದ್ದು ಕುಳಿತಿದ್ದೆ.

★★★

ಈ ವಿಲಾಸಿನಿ ಎಂಬ ಚೆಲುವೆ ನಮ್ಮ ಕೊಡಗಿನ ಪಶ್ಚಿಮ ಮೂಲೆಯ ಕುಗ್ರಾಮವೊಂದರ ಪಶುವೈದ್ಯರಾದ ಶೀಷೆ ಶೇಷಪ್ಪನವರ ಮಡದಿ. ಅವಳ ಮಡಿಲಿಗೊಂದು ಮಗು ಕೊಡಬೇಕೆಂದು ಶೇಷಪ್ಪನವರು ಕಳೆದ ಹಲವು ವರ್ಷಗಳಿಂದ ಪ್ರಯತ್ನಿಸುತ್ತಲೇ ಇರುವವರು. ವಿಲಾಸಿನಿಯ ಒಂದು